ಕೆಂಪುಕೋಟೆಗೆ ಲಾಹೋರ್ ಗೇಟ್ ಇರುವಂತೆ. ಒಳಗೆ ಕಲ್ಲುಹಾಸಿನ ಕಿರಿದಾದ ಓಣಿಯ ನಿಡಿದಾದ ಬೀದಿಗಳು.

ಜೆರುಸಲೇಂ ವ್ಯವಸ್ಥಿತವಾಗಿ ಕಟ್ಟಲ್ಪಟ್ಟ ರೋಮನ್ ನಗರ. ಸಣ್ಣ ಊರು ನಗರವಾಗಿ ರೂಪಾಂತರವಾಗುವುದು ಅದರ ಅದೃಷ್ಟ; ಮತ್ತೆ ಮತ್ತೆ ಮುತ್ತಿಗೆಗೆ ಒಳಗಾಗುತ್ತ ದೊರೆಯಿಂದ ದೊರೆಗೆ ಕೈಯಾಂತರವಾಗುವುದು ದುರ್ವಿಧಿ. ಕದನದಲ್ಲಿ ಗೆದ್ದವರು ನಗರಗಳನ್ನು ಕೆಡವಬಹುದು, ಕಟ್ಟಲೂಬಹುದು. ರೋಮನ್ನರು, ಅರಬ್ಬರು, ಧರ್ಮಯುದ್ಧಕ್ಕಾಗಿ ಬಂದ ಕ್ರೈಸ್ತರು, ಪರ್ಶಿಯನ್ನರು, ಟರ್ಕಿಗಳು, ಬ್ರಿಟಿಷರು ಇದನ್ನು ಗೆದ್ದು ಕೆಡಹಿ, ಕಟ್ಟಿದರು. ಸಹಸ್ರಾರು ವರ್ಷ ಹಲವಾರು ನಾಗರಿಕ ಜನಾಂಗಗಳ ಆಳ್ವಿಕೆಯಲ್ಲಿ ರೂಪುಗೊಂಡ ಜೆರುಸಲೇಂ, ನೂರಾರು ಸಲ ಧ್ವಂಸಗೊಳ್ಳುತ್ತ ತನ್ನ ಭಗ್ನಾವಶೇಷಗಳಿಂದಲೇ ಮರುಜನ್ಮ ಪಡೆಯುತ್ತ ಬಂದಿರುವ ಫೀನಿಕ್ಸ್ ಹಕ್ಕಿಯಂತಿದೆ.

## ರಕ್ತಪಾತದ ಗತಚರಿತ್ರೆ

ಜೆರುಸಲೇಂ ಹೊಟ್ಟೆಯಲ್ಲಿ ಪದರ ಪದರವಾಗಿ ಹುದುಗಿರುವ ಯುದ್ಧ, ಆಕ್ರಮಣಗಳ ಈ ಗತಚರಿತ್ರೆ ಸಂಘರ್ಷಗಳಿಂದಲೂ ರಕ್ತಪಾತಗಳಿಂದಲೂ ಕೂಡಿದೆ. ತಮ್ಮ ತಮ್ಮ ಧಾರ್ಮಿಕ ಪವಿತ್ರ ಜಾಗಗಳ ಕಬ್ಜಾ ಪಡೆಯಲು ಮೂರೂ ಧರ್ಮಗಳು ದಾಯಾದಿ ಕಲಹ ಮಾಡಿವೆ. ಇಲ್ಲಿನ ಚರ್ಚುಗಳನ್ನು ವಿಮೋಚಿಸಲು ಯೂರೋಪಿನ ಕ್ರೈಸ್ತರು ಕ್ರುಸೇಡಿನ ಪಡೆಗಳನ್ನು ಕಳಿಸಿಕೊಟ್ಟವು. ಜ್ಯೂಗಳು ಪವಿತ್ರ 'ಗೋಳಿನಗೋಡೆ' ವಶಪಡಿಸಿಕೊಳ್ಳಲು 'ಆರು ದಿನದ ಯುದ್ಧ'ವೆಂದು ಖ್ಯಾತವಾಗಿರುವ ಕದನ ಮಾಡಿದರು. ಪ್ರವಾದಿಗಳಿಗೆ ಸಂಬಂಧವಿರುವ ಸಮಾಧಿ ಸ್ಮಾರಕಗಳನ್ನು ಉಳಿಸಿಕೊಳ್ಳಲು ಅರಬ್ಬರು ಹೋರಾಡಿದರು. ದೇವರು ಒಬ್ಬನೇ ಎಂದು ಸಾರುವ ಮತ್ತು ವಿಗ್ರಹಾರಾಧನೆ ನಿರಾಕರಿಸುವ ಈ ಏಕದೇವತಾ ಧರ್ಮಗಳು, ಸ್ಥಾವರ ಕಟ್ಟಡಗಳನ್ನು ವಶಪಡಿಸಿಕೊಳ್ಳಲು ಪರಸ್ಪರ ಕಾದಾಡಿರುವುದು ಒಂದು ವ್ಯಂಗ್ಯ. ಆದಿಮ ಬುಡಕಟ್ಟಿನ ಜನ ಜೆರುಸಲೇಮಿನ ದ್ರಾಕ್ಷಿ ತೋಟ, ಕಣಿವೆ, ಹೊಳೆಗಳ ಮೇಲೆ ಹಿಡಿತ ಸಾಧಿಸಲು ಸಂಘರ್ಷ ಮಾಡಿದ್ದನ್ನು ಅರ್ಥ ಮಾಡಿಕೊಳ್ಳಬಹುದು. ನಾಗರಿಕ ಸಮುದಾಯಗಳು ಧರ್ಮದ ಹೆಸರಲ್ಲಿ ಸಂಘರ್ಷ ಮಾಡಿದ್ದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು? ದೋಷ ಧರ್ಮಗಳದ್ದೋ, ಜೆರುಸಲೇಮಿನ ಆಕರ್ಷಣೆಯದ್ದೋ ಅಥವಾ ಧರ್ಮದ ಹೆಸರಲ್ಲಿ ಸಮುದಾಯಗಳ ಹಿತಾಸಕ್ತಿಗಳದ್ದೋ?



ಪ್ಯಾಲೆಸ್ಟೈನ್ ಯುವಕ

**ಜೆರುಸಲೇಂ ನಗರ ವಿಭಜನೆ ಮಾಡಿರುವ ಗೋಡೆ**

